**2 ನೇ ಹೆಚ್ಚುವರಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಗಳ ನ್ಯಾಯಾಲಯ, ಹೆಚ್ ಡಿ ಕೋಟೆ**

**ಸಿ.ಸಿ ನಂ. 509/2018**

**ಸಿ.ಡಬ್ಲ್ಯೂ- 8 ಪಿ.ಡಬ್ಲ್ಯೂ- 2**

| | | |
|---|---|---|
| ಸಾಕ್ಷಿದಾರರ ಹೆಸರು | : | ಗುರು |
| ತಂದೆಯ ಹೆಸರು | : | ಮಲ್ಲಣ್ಣ |
| ವಯಸ್ಸು | : | 47 |
| ಉದ್ಯೋಗ | : | ಮುಖ್ಯ ಪೇದೆ |
| ವಾಸ ಸ್ಥಳ | : | ನಂಜನಗೂಡು |

**ದಿನಾಂಕ 26.10.2024 ರಂದು ಸಾಕ್ಷಿಗೆ ಪ್ರಮಾಣ ಭೋಧಿಸಲಾಯಿತು.**

**ಮುಖ್ಯ ವಿಚಾರಣೆ:- ಸ.ಸ. ಅ ರವರಿಂದಃ**

2015 ರಿಂದ 2017 ರವರೆಗೆ ಹೆಚ್ ಡಿ ಕೋಟೆ ಪೋಲೀಸ್ ಠಾಣೆಯಲ್ಲಿ ಮುಖ್ಯಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 06.09.2017 ರಂದು ಚಾಸಾ 23 ರವರ ಆದೇಶದ ಮೇರೆಗೆ ಚಾಸಾ 1 ಮತ್ತು 4 ರಿಂದ 22 ರವರು ಹುಣಸೂರು ಬೇಗೂರು ಮುಖ್ಯ ರಸ್ತೆಯಲ್ಲಿ ಬ್ಯಾರಿಕೇಡ್ ಅಳವಡಿಸಿ ತಪಾಷಣೆ ಮಾಡುತ್ತಿದ್ದಾಗ ಸು-30 ರಿಂದ 40 ಜನ ಮೋಟಾರ್ ಬೈಕಿನಲ್ಲಿ ಬೆಳಿಗ್ಗೆ 11 ಗಂಟೆ ಸಮಯದಲ್ಲಿ ಸರ್ಕಾರದ ವಿರುದ್ದ ಘೋಷಣೆಗಳನ್ನು ಕೂಗುತ್ತಾ ಬಿ ಜೆ ಪಿ ಬಾವುಟ ದ್ವಿ ಚಕ್ರ ವಾಹನಕ್ಕೆ ಅಳವಡಿಸಿಕೊಂಡು ಹೆಚ್ ಡಿ ಕೋಟೆ ಬಸ್ ನಿಲ್ದಾಣದಿಂದ ಹುಣಸೂರು ಕಡೆಗೆ ಬರುತ್ತಿದ್ದು, ಅವರನ್ನು ನಾವು ಮತ್ತು ಚಾಸಾ 1 ರವರ ತಡೆದು ನಿಲ್ಲಿಸಿ ಅವರು ಆರೋಪಿ 1 ಮತ್ತು 2 ರವರ ಮುಂದಾಳತ್ವದಲ್ಲಿ ಮಂಗಳೂರಿಗೆ ರ್ಯಾಲಿಗೆ ಹೋಗುತ್ತಿದ್ದೇವೆ ಎಂದು ತಿಳಿಸಿರುತ್ತಾರೆ. ಆಗ ಚಾಸಾ 1 ರವರು ದಿನಾಂಕ 05.09.2017 ರಿಂದ 08.09.2017 ಸಂಜೆ 6 ಗಂಟೆವರೆಗೆ

ಯಾವುದೇ ರ್ಯಾಲಿ ನಡೆಸದಂದತೆ ನಿಷೆದಾಜ್ಞೆ ನೀಡಿರುತ್ತಾರೆ. ಸದರಿ ಆದೇಶವನ್ನು ಓದಿ ಹೇಳಿದ್ದರು ಬ್ಯಾರಿ ಕೇಡ್ ಗಳನ್ನು ತಳ್ಳಿ ಮುಂದೆ ಹೋಗಲು ಪ್ರಯತ್ನಿಸಿರುತ್ತಾರೆ. ಆಗ ಚಾಸಾ 1 ಮತ್ತು ಸಿಬ್ಬಂದಿಗಳೆಲ್ಲ ಸೇರಿ ಅವರನ್ನು ತಡೆದು 12 ದ್ವಿ ಚಕ್ರ ವಾಹನ 47 ಜನರನ್ನು ವಶಕ್ಕೆ ಪಡೆದು ಸರ್ಕಾರದ ಪರವಾಗಿ ಸ್ವ  ವರದಿ ತಯಾರಿಸಿ ಅಮಾನತ್ತುಪಡಿಸಿಕೊಂಡಿರುತ್ತೇವೆ. ಈ ವಿಚಾರವಾಗಿ ಹೇಳಿಕೆ ನೀಡಿರುತ್ತೇನೆ.

## ಪಾಟೀ ಸವಾಲು ಆರೋಪಿತರ ಪರ ವಕೀಲರಿಂದಃ

ಆ ದಿನ ಕರ್ತವ್ಯ ನಿರ್ವಹಿಸಿದ ಬಗ್ಗೆ ಠಾಣೆ ದಿನಚರಿಯಹಲ್ಲಿ ನಮೂದಿಸಿರುತ್ತೇವೆ ಎಂದರೆ ಸರಿ. ರ್ಯಾಲಿ ಸಂಬಂಧ ಪೋಲೀಸ್ ಠಾಣೆ ಮುಂಭಾಗ ಕರ್ತವ್ಯಕ್ಕೆ ನೇಮಿಸಿದ್ದರು. ಕರ್ತವ್ಯಕ್ಕೆ ಅ ದಿನ 18 ಜನ ನೇಮಕವಾಗಿದ್ದೆವು. ಸುಮಾರು 11.05 ಕ್ಕೆ ಠಾಣೆ ಮುಂದೆ ಬಂದಿರುತ್ತಾರೆ. ಪೂರ್ತಿ ರಸ್ತೆ ಬ್ಯಾರಿಕೇಡ್ ಅಳವಡಿಸಿರುತ್ತೇವೆ. ಬೇರೆ ವಾಹನಗಳನ್ನು ಸಹ ತಪಾಷಣೆ ಮಾಡಿ ಬಿಡುತ್ತಿದ್ದೆವು. ಅಷ್ಟೂ ಜನರ ಹೆಸರನ್ನು ಹೇಳಾಲಾಗುವುದಿಲ್ಲ ಕೆಲವು ಮುಖ್ಯಸ್ಥರ ಹೆಸರನ್ನು ಹೇಳುತ್ತೇನೆ. 12 ಬೈಕ್ ನ ನಂಬರ್ ಗಳನ್ನು  ಹೇಳಲಾಗುವುದಿಲ್ಲ. ಆ ದಿನ ಆರೋಪಿತರು ಬೈಕನ್ನು ತೆಗೆದುಕೊಂಡು ರ್ಯಾಲಿಗೆ ಬಂದಿರಲಿಲ್ಲ ಎಂದರೆ ಸರಿಯಲ್ಲ. ಆರೋಪಿತರು ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಬೈಕ್ ಸಮೇತ ಬಾವುಟವನ್ನು ಅಮಾನತ್ತುಪಡಿಸಿಕೊಂಡಿರುತ್ತೇವೆ.ನನ್ನ ಸಮಕ್ಷಮ ಯಾವುದೇ ಬೈಕುಗಳನ್ನು ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ.

## ಮರು ವಿಚಾರಣೆ ಇಲ್ಲ.

(ತೆರೆದ ನ್ಯಾ. ದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಲಾಯಿತು)

**2 ನೇ ಹೆಚ್ಚುವರಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ. ದಂಡಾಧಿಕಾರಿಗಳು, ಹೆಚ್.ಡಿ. ಕೋಟೆ.**